<u>1ನೇ ಅಪರ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ</u>
<u>ಬೆಂಗಳೂರು ನಗರ</u>

ಸಿ.ಸಿ. ನಂ. 8851-2024

ಸಿಡಬ್ಲೂ -1 ಪಿಡಬ್ಲೂ-1

| | |
|---|---|
| ಸಾಕ್ಷಿದಾರರ ಹೆಸರು | : ಚೇತನ |
| ತಂದೆಯ ಹೆಸರು | : ಪುಟ್ಟೇಗೌಡ |
| ವಯಸ್ಸು | : 39 ವರ್ಷ |
| ಕೆಲಸ | : ಖಾಸಗಿ ಕೆಲಸ |
| ವಾಸ | : ಮತ್ತಿಕೆರೆ, ಬೆಂಗಳೂರು |

<u>ಸಾಕ್ಷಿಯನ್ನು ದಿನಾಂಕಃ 06-03-2026 ರಂದು ಕರೆಸಿ ಪ್ರಮಾಣ ಮಾಡಿಸಲಾಯಿತು.</u>

<u>ಮುಖ್ಯ ವಿಚಾರಣೆ ಹಿ.ಸ.ಸಾ.ಅ. ರವರಿಂದಃ</u>

ನನಗೆ ಚಾಸಾ 2 ರಿಂದ 6 ರವರು ಗೊತ್ತು. ಸಾಕ್ಷಿಯು ದೂರು ಮತ್ತು ಪಂಚನಾಮೆಯಲ್ಲಿನ ತನ್ನ ಸಹಿಗಳನ್ನು ನೋಡಿ ಗುರುತಿಸಿದ್ದು ದೂರನ್ನು ನಿಪಿ.1 ಎಂದು ಸಾಕ್ಷಿಯ ಸಹಿಯನ್ನು ನಿಪಿ.1ಎ ಎಂದು, ಪಂಚನಾಮೆಯನ್ನು ನಿಪಿ.2 ಎಂದು ಸಾಕ್ಷಿಯ ಸಹಿಯನ್ನು ನಿಪಿ.2ಎ ಎಂದು ಗುರುತಿಸಲಾಯಿತು. ಆರೋಪಿಯು ನಮ್ಮ ದೊಡ್ಡಮ್ಮನ ಊರಿನವರು. ಚೀಟಿ ವ್ಯವಹಾರ ಮಾಡುತ್ತಿದ್ದರು. ದಿ. 18-06-2018 ರಂದು ಆರೋಪಿಯು ನನ್ನಿಂದ ವ್ಯವಹಾರಕ್ಕಾಗಿ ನಗದು ಮೂಲಕ ರೂ. 5 ಲಕ್ಷ ಹಣವನ್ನು ಪಡೆದು, ಜನೇವರಿ 2021 ಕ್ಕೆ ಸದರಿ ಹಣವನ್ನು ವಾಪಸ್ಸು ನೀಡುವುದಾಗಿ ಹೇಳಿರುತ್ತಾರೆ.

2020 ರಲ್ಲಿ ನನ್ನ ಮದುವೆ ಇದ್ದ ಕಾರಣ ಹಣವನ್ನು ವಾಪಸ್ಸು ಕೊಡುವಂತೆ ಕೇಳಿರುತ್ತೇನೆ. ಆಗ ಆರೋಪಿಯು ಕರೋನಾ ಬಂದಿದ್ದ ಕಾರಣ ತನ್ನ ಬಳಿ ಯಾವುದೇ ಹಣ ಇಲ್ಲಾ ಸ್ವಲ್ಪ ಸ್ವಲ್ಪ ನೀಡುತ್ತೇನೆ ಎಂದು ತಿಳಿಸಿರುತ್ತಾರೆ. ನಂತರ ತನ್ನ ಮೊಬೈಲ್ ಸಂಖ್ಯೆಯನ್ನು ಸ್ವಿಚ್ ಆಫ್ ಮಾಡಿಕೊಂಡು ಬೇರೆ ಬೇರೆ ಸಂಖ್ಯೆಗಳನ್ನು ಉಪಯೋಗಿಸಿರುತ್ತಾರೆ. ಹಣವನ್ನು ವಾಪಸ್ಸು ಕೊಡುವಂತೆ ಆರೋಪಿಯ ತಾಯಿ ಮತ್ತು ಹೆಂಡತಿಯನ್ನು ಕೇಳಿದ್ದು ಅವರು ಪೊಲೀಸ್ ಠಾಣೆಯಲ್ಲಿ ನೀಡಿದ್ದು ಅಲ್ಲಿ ವಾಪಸ್ಸು ಪಡೆದುಕೊಳ್ಳಿ ಎಂದು ತಿಳಿಸಿರುತ್ತಾರೆ. ನಂತರ ಪೊಲೀಸರು ಗೊತ್ತು ವಕೀಲರು ಗೊತ್ತು ಹಣ ಕೊಡುವುದಿಲ್ಲ ಎಂದು ಬೆದರಿಕೆ ಹಾಕಿರುತ್ತಾರೆ.

(ಈ ಹಂತದಲ್ಲಿ ಮುಂದುವರಿದ ಮುಖ್ಯ ವಿಚಾರಣೆಗೆ ಸಮಯಾವಕಾಶವನ್ನು ಕೋರಿದ್ದು ಸಮಯಾವಕಾಶವನ್ನು ನೀಡಲಾಯಿತು )

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು. ಸಾಕ್ಷಿಯ ಎದುರಿನಲ್ಲಿ ಓದಿ ಹೇಳಿದ ಮೇಲೆ ಸರಿ ಇದೆ ಎಂದು ಒಪ್ಪಿ ಸಹಿ ಮಾಡಲಾಯಿತು.)

ಓ ಹೇ ಕೇ ಸ ಇ ಒ

1 ನೇ ಅ. ಮು. ನ್ಯಾ.ದಂ. ನ್ಯಾ